# ಕನ್ನಡ ಕಾವ್ಯ ಪರಂಪರೆ: ವಸ್ತು ಮತ್ತು ಆಶಯ

ಡಾ. ಲಕ್ಷ್ಮೀಕಾಂತ ಪಂಚಾಳ
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಂಪೂರ
ತಾ.ಜಿ. ಬಾಗಲಕೋಟೆ-೫೮೭೧೦೭
ಮಿಂಚಂಚೆ : cplk16@gmail.com

ಮಾನವ ವಿಕಾಸ ಕ್ರಮದಲ್ಲಿ ಭಾಷೆಯ ಆವಿಷ್ಕಾರ ಒಂದು ಅದ್ಭುತವಾದ ಘಟನೆ. ತನ್ನ ಜೀವನದ ಆಗು-ಹೋಗುಗಳನ್ನು ಶಿಲ್ಪ, ಸಂಗೀತ, ನಾಟ್ಯ, ಕಲೆ, ಸಾಹಿತ್ಯ ಮೊದಲಾದ ಕಲಾಮಾಧ್ಯಮಗಳ ಮೂಲಕ ಅಭಿವ್ಯಕ್ತಿಯಲ್ಲಿ ತೊಡಗಿದ. ಹಾಗೇ ಸಾಹಿತ್ಯವೂ ಕೂಡ ಒಂದು ಸಶಕ್ತವಾದ ಅಭಿವ್ಯಕ್ತಿ ಮಾಧ್ಯಮವಾಗಿದೆ. ಸಾಹಿತ್ಯ ಎಂಬುದು ಜೀವನದ ಗತಿಬಿಂಬ; ಪ್ರತಿಬಿಂಬ ಎಂದು ವಿದ್ವಾಂಸರು ದಾಖಲಿಸಿದ್ದಾರೆ.

ಬದುಕು ನಿಂತ ನೀರಲ್ಲ; ಅದು ಹರಿಯುತ್ತಿರುವ ನದಿಯಂತೆ, ಸಾಹಿತ್ಯವೂ ಕೂಡ ನಿತ್ಯನೂತನವಾಗಿ ಸದಾ ಹರಿಯುತ್ತಿರುವ ಜೀವ ನದಿಯಂತೆ, ಬದಲಾಗುವ ಬದುಕಿನ ಸಂಕ್ರಮಣಗಳಿಗೆ ಮನಸ್ಸು ತೆರೆದುಕೊಳ್ಳುವುದರಿಂದ ಸಾಹಿತ್ಯ ಚರಿತ್ರೆಯು ಘಟ್ಟಗಳಲ್ಲಿ ರೂಪುಗೊಳ್ಳುತ್ತದೆ. ಇದು ಅಂದಿನ ಸಾಹಿತ್ಯ ರಚನೆಯ ಏಳು-ಬೀಳಿನ ದೃಷ್ಟಿ-ಧೋರಣೆಯನ್ನು ಮಾತ್ರ ಹೇಳದೇ ಬದಲಾದ ಆಯಾಯ ಯುಗಮನೋಧರ್ಮದ ಸಮಗ್ರ ಸಮಾಜದ ಸಾಂಸ್ಕೃತಿಕ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ.

ಜಗತ್ತಿನ ಪ್ರತಿಯೊಂದು ಭಾಷೆಯು ತನ್ನದೆ ಆದ ಸಾಹಿತ್ಯಕ ಇತಿಹಾಸವನ್ನು ಹೊಂದಿರುತ್ತದೆ. ಅದಕ್ಕೆ ಕನ್ನಡ ಭಾಷೆಯು ಹೊರತಲ್ಲ. ಕನ್ನಡ ಭಾಷೆ, ಸಾಹಿತ್ಯದ ಇತಿಹಾಸವನ್ನು ಮಹಾಭಾರತ, ರಾಮಾಯಣ, ಪುರಾಣ ಕಾವ್ಯಗಳಲ್ಲಿ ಗುರುತಿಸುವ ಪ್ರಯತ್ನಗಳು ನಡೆದಿವೆ. ನಂತರದ ಅವಧಿಯಲ್ಲಿ ಕಲ್ಬರಹಗಳು ಶಾಶ್ವತವಾದ ದಾಖಲೆಗಳಾಗಿ ನಮ್ಮೊಂದಿಗಿವೆ. ಕ್ರಿ.ಪೂ. ೩ನೇ ಶತಮಾನದ ಅಶೋಕ ಚಕ್ರವರ್ತಿಯ ಕಾಲದಲ್ಲಿ ಶಾಸನಗಳಲ್ಲಿ ಸಿಗುವ ಪದಗಳು ಕನ್ನಡ ಭಾಷೆಯ ಆರಂಭದ ಪದಗಳು ಎಂದು ಗುರುತಿಸುವ ಪ್ರಯತ್ನಗಳು ನಡೆದಿವೆಯಾದರೂ, ಖಚಿತವಾದ ಮೊದಲ ದಾಖಲೆ ಸಿಗುವುದು ಕ್ರಿ.ಶ. ೫ ನೇ ಶತಮಾನ ಹಲ್ಮಿಡಿ ಕಲ್ಬರಹ. ಇದನ್ನು ಆಧಾರವಾಗಿ ಪರಿಗಣಿಸಿದರೂ, ಕನ್ನಡ ಸಾಹಿತ್ಯ ಚರಿತ್ರೆಗೆ ಸಾವಿರದ ಆರು ನೂರು ವರ್ಷಗಳ ದೀರ್ಘವಾದ ಚರಿತ್ರೆ ಇರುವುದನ್ನು ಕಾಣಬಹುದು.ಅದು ಕಾಲ, ದೇಶ, ಪರಿಸರ, ಪರಿಸ್ಥಿತಿ ಮತ್ತು ತುರ್ತಿಗೆ ಅನುಗುಣವಾಗಿ ಬದಲಾಗುತ್ತ, ರೂಪುಗೊಳ್ಳುತ್ತಾ, ಬೆಳೆಯುತ್ತಾ ಬಂದಿದೆ. ಇದನ್ನು ಕವಿ, ಕಾಲಘಟ್ಟ, ಧರ್ಮ, ರಸ, ಭಾಷೆ, ಮೊದಲಾದವುಗಳನ್ನು ಸಾಕ್ಷೀಕರಿಸಿ ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂದು ವಿಭಾಗಿಸುವುದುಂಟು.

‘ಹಲ್ಮಿಡಿ ಶಾಸನ’ ಕನ್ನಡದ ಮೊದಲ ಉಪಲಬ್ಧ ಶಾಸನವೆಂದು ಕನ್ನಡ ಸಾಹಿತ್ಯಕ್ಕೆ ಒಂದು ಖಚಿತತೆಯನ್ನು ಒದಗಿಸಿದೆ. ಜೊತೆಗೆ ಚಾರಿತ್ರಿಕವಾಗಿ ಕದಂಬ ವಂಶದ ಕಾಕುಸ್ಥವರ್ಮನ ವಿವರಣೆಯನ್ನು ದಾಖಲಿಸಿದೆ. ಇಲ್ಲಿ ದಾನದ ವಿಷಯ ಪ್ರಸ್ತಾಪಗೊಂಡಿದೆ. ಅನಂತರದ ಕಾಲದಲ್ಲಿ ಶ್ರವಣಬೆಳಗೊಳ ಶಾಸನವು ‘ನಂದಿಸೇನ’ ಎಂಬ ಯತಿವರ್ಯನ ಉಲ್ಲೇಖ ಮಾಡುತ್ತ, ಬದುಕಿನ ನಶ್ವರತೆಯನ್ನು ಕಾಮನಬಿಲ್ಲಿನಂತೆ, ಮಿಂಚಿನಂತೆ ಕ್ಷಣಿಕ ಎಂಬುದನ್ನು ತಿಳಿಸುತ್ತದೆ.

ಕ್ರಿ.ಶ. ೭ ನೇ ಶತಮಾನವೂ ಕನ್ನಡ ಸಾಹಿತ್ಯದ ದೃಷ್ಟಿಯಿಂದ ಮತ್ತೊಂದು ಮಹತ್ವದ ಮೈಲಿಗಲ್ಲು. ಅದು ಬಾದಾಮಿಯ ಕಲ್ಬರಹ. ಇದು ಕಪ್ಪೆಅರಭಟ್ಟನೆಂಬ ವ್ಯಕ್ತಿಯ ಉದಾತ್ತ ವ್ಯಕ್ತಿತ್ವವನ್ನು ಚಿತ್ರಿಸುವ ವ್ಯಕ್ತಿಚಿತ್ರವಾಗಿದೆ. ಇದಕ್ಕೆ ಸಾಹಿತ್ಯಕವಾದ ಮತ್ತೊಂದು ಮಹತ್ವವಿದೆ. ಇದರಲ್ಲಿ ಮೊದಲ ಬಾರಿಗೆ ಅಂಶಗಣಾನ್ವಿತವಾದ ತ್ರಿಪದಿಯ ಬಳಕೆಯಾಗಿದೆ. ಇದು ಕೇವಲ ಕಪ್ಪೆಅರಭಟ್ಟನ ಚಿತ್ರಣವಾಗಿರದೆ, ಅದು ಸಮಕಾಲೀನ ಸಂದರ್ಭದ ಕನ್ನಡಿಗರ ಉದಾತ್ತ ಜೀವನದ ದ್ಯೋತಕವೆಂದೇ ಹೆಸರಿಸಬಹುದು.

ಅನಂತರ ಕನ್ನಡ ಸಾಹಿತ್ಯ ಪರಂಪರೆಯ ಮೊದಲ ಉಪಲಬ್ಧ ಕೃತಿ ದೊರೆಯುವುದು, ೯ನೇ ಶತಮಾನದ ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ. ನೃಪತುಂಗನ ಆಸ್ಥಾನದ ಕವಿ ಶ್ರೀವಿಜಯ ವಿರಚಿತ 'ಕವಿರಾಜಮಾರ್ಗ'. ಈ ಕೃತಿಯು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಈ ಮುಂಚಿನ ಕನ್ನಡದ ಹಲವು ಪದ್ಯ-ಗದ್ಯಕಾರರನ್ನು ದಾಖಲಿಸುವುದರಿಂದ ಸಂಶೋಧನೆಗೆ ಎಡೆಮಾಡಿಕೊಟ್ಟಿದೆ. ಕವಿರಾಜಮಾರ್ಗವೂ ಕನ್ನಡ ನಾಡಿನ ಗಡಿಯನ್ನು 'ಕಾವೇರಿಯಿಂದ ಗೋದಾವರಿ ನದಿಯವರೆಗೆ' ಎಂಬುದನ್ನು ಸ್ಪಷ್ಟಪಡಿಸುತ್ತದೆ.ಅಲ್ಲದೆ ಕನ್ನಡದ ಜನತೆಯ ಗುಣವಿಶೇಷತೆಗಳನ್ನು 'ಸುಭಟರು, ಕವಿಗಳು, ಚೆಲುವುಳ್ಳವರು, ಗುಣಿಗಳು ಅಭಿಮಾನಿಗಳು, ಕುರಿತೋದದೆಯೂ ಕಾವ್ಯ ಪ್ರಯೋಗ ಮಾಡುವ ಪರಿಣತರು' ಎಂಬುದಾಗಿಯೂ ತಿಳಿಸುತ್ತದೆ. ಪರಧರ್ಮ ಪರ ವಿಚಾರ ಸಹಿಸುವುದು ನಿಜವಾದ ಧರ್ಮ ಎಂದು ಭಾವಿಸುತ್ತದೆ. ಹೀಗಾಗಿ ಸಹಬಾಳ್ವೆ, ಸಹೋದರತ್ವ, ಸಹಕಾರ, ವಿಶ್ವಮಾನವೀಯ ಗುಣ ಮೊದಲಾದವುಗಳ ಆಗರವಾಗಿ ಕನ್ನಡ ಕಾವ್ಯಕ್ಕೆ ಭದ್ರವಾದ ಬುನಾದಿಯನ್ನು ಹಾಕಿದೆ.

'ವಡ್ಡಾರಾಧನೆ' ಕನ್ನಡ ಸಾಹಿತ್ಯದಲ್ಲಿ ಮತ್ತೊಂದು ಮಹತ್ವದ ಕೃತಿ. ಕನ್ನಡದ ಮೊದಲ ಉಪಲಬ್ದ ಗದ್ಯಗ್ರಂಥ ಎಂಬುದು ಒಂದು ಕಡೆಯಾದರೆ; ಜೈನ ಧರ್ಮದ ತತ್ವಗಳನ್ನು ಕಥೆಗಳ ಮೂಲಕ ಪ್ರಸಾರಮಾಡುವುದಷ್ಟಕ್ಕೆ ಸೀಮಿತವಾಗದೆ ಕಲಾತ್ಮಕವಾದ ನಿರೂಪಣಾ ಶೈಲಿ ಇದರ ಮತ್ತೊಂದು ವೈಶಿಷ್ಟ್ಯವಾಗಿದೆ. ೧೯ ಕಥೆಗಳ ಗುಚ್ಛವಾಗಿರುವ ಈ ಗ್ರಂಥವು ಶಿವಕೋಟಾಚಾರ್ಯನಿಂದ ರಚಿತವಾಗಿದೆ. ಸತ್ಯ, ಅಹಿಂಸೆ, ಅಸ್ತೇಯ, ಅಪರಿಗ್ರಹ, ಕಷ್ಟಸಹಿಷ್ಣುತೆ, ಏಕಾಗ್ರತೆ, ನ್ಯಾಯ ನೀತಿಮಾರ್ಗ ಮೊದಲಾದ ಮಾನವೀಯ ಗುಣಗಳನ್ನು ತಿಳಿಹೇಳುವುದು ಇಲ್ಲಿ ಕಾಣಬಹುದಾಗಿದೆ.

೧೦ ನೇ ಶತಮಾನವನ್ನು ಕನ್ನಡ ಸಾಹಿತ್ಯದ ಸುವರ್ಣಯುಗ ಎಂದೇ ಕರೆಯುತ್ತಾರೆ. ಸಂಸ್ಕೃತ ಸಾಹಿತ್ಯದ ಗಾಢ ಪ್ರಭಾವಕ್ಕೆ ಒಳಗಾಗಿ ಸಂಸ್ಕೃತ ಭೂಯಿಷ್ಠತೆಯಿಂದ ಕೂಡಿದ 'ಮಾರ್ಗ' ಶೈಲಿಯಲ್ಲಿ ಸಾಹಿತ್ಯ ರಚಿತವಾಯಿತು. ಬಹುತೇಕವಾಗಿ ಈ ಶತಮಾನದ ಕವಿಗಳು ಜೈನ ಧರ್ಮದ ಹಿನ್ನೆಲೆಯುಳ್ಳವರು. ಪಂಪನಿಗಿಂತಲೂ ಹಿಂದೆಯೇ (ಗುಣವರ್ಮ-೧) ಬಳಕೆಯಲ್ಲಿದ್ದ ಆಗಮಿಕ ಮತ್ತು ಲೌಕಿಕ ಎಂಬ ಕಾವ್ಯಮಾರ್ಗವನ್ನು ಅನುಸರಿಸಿದರು. ಆಗಮಿಕ ಕಾವ್ಯಗಳಲ್ಲಿ ಜೈನ ತೀರ್ಥಂಕರರು, ಚಕ್ರವರ್ತಿಗಳು, ಮಹಾಪುರುಷರ ಜೀವನವನ್ನು ವಿವರಿಸಿದರೆ; ಲೌಕಿಕ ಕಾವ್ಯಗಳಲ್ಲಿ ಆಶ್ರಯದಾತ ಅರಸನ ಚರಿತ್ರೆ, ತತ್ಕಾಲೀನ ರಾಜಕೀಯ, ಮಹಾಭಾರತ-ರಾಮಾಯಣದಂತಹ ಚಾರಿತ್ರಿಕ ಕಾವ್ಯಗಳನ್ನು ಕಥಾವಸ್ತುವನ್ನು ಹೊಂದಿವೆ. ಈ ಕಾವ್ಯಗಳು ಪಾಂಡಿತ್ಯ ಪ್ರಧಾನವಾಗಿ, ಛಂದೋಬದ್ಧವಾಗಿ ರೂಪುಗೊಂಡಿದ್ದವು. ಚಂಪೂ ರೂಪವು ಈ ಶತಮಾನದಲ್ಲಿ ತನ್ನ ಉತ್ತುಂಗ ಸ್ಥಾನ ತಲುಪಿತು.ಈ ಕವಿಗಳು ಧರ್ಮ-ಕಾವ್ಯಧರ್ಮವನ್ನು ಸಮನ್ವಯಗೊಳಿಸಿದರು. ವೀರಯುಗಕ್ಕೆ ಸಂಬಂಧಿಸಿದಂತೆ ವೀರಮೌಲ್ಯಗಳನ್ನು ಪ್ರತಿಪಾದಿಸಿದರು.

ಈ ಯುಗದ ಕವಿ, ಮಹಾಕವಿ, ಕನ್ನಡದ ಆದಿಕವಿ ಪಂಪ. ಈತನು ಹತ್ತನೆಯ ಶತಮಾನದ ಪ್ರಾತಿನಿಧಿಕ ಕವಿಯಾಗಿದ್ದಾನೆ. ಪಂಪನು ತುಳಿದ ದಾರಿ ಮುಂದಿನ ಬಹುತೇಕ ಜೈನ ಕವಿಗಳು ಅನುಸರಿಸಿದ್ದಾರೆ. ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಎಂಬ ಕಾವ್ಯವನ್ನು ರಚಿಸಿದ್ದಾನೆ. ಆದಿಪುರಾಣವು ಪಂಪನ ಆಗಮಿಕ ಅಥವಾ ಧಾರ್ಮಿಕ ಕಾವ್ಯವಾಗಿದೆ. ಇದು ಮೊದಲ ತೀರ್ಥಂಕರನಾದ ಆದಿನಾಥನ ಮತ್ತು ಮೊದಲ ಚಕ್ರವರ್ತಿಯಾದ ಭರತನ ಚರಿತ್ರೆಯನ್ನು ಕಥಾವಸ್ತುವನ್ನಾಗಿ ಹೊಂದಿದೆ. ಆದಿನಾಥನ ಕಥೆಯು ಕಾಮತ್ಯಾಗವನ್ನು ತಿಳಿಸಿದರೆ; ಭರತನ ಕಥೆಯು, ಅಹಂಕಾರ ತ್ಯಾಗವನ್ನು ತಿಳಿಸುತ್ತದೆ. ವಿಕ್ರಮಾರ್ಜುನ ವಿಜಯ ಕಾವ್ಯಕ್ಕೆ ಪಂಪಭಾರತ ಎಂತಲೂ ಹೆಸರಿದೆ. ಮಹಾಕವಿ ವ್ಯಾಸರ ಮಹಾಭಾರತವನ್ನು ಪಂಪ ಕನ್ನಡಿಸಿದ್ದಾನೆ. ಕಾವ್ಯನಾಯಕನಾದ ಅರ್ಜುನನಿಗೆ ತನ್ನ ಆಶ್ರಯದಾತನಾದ ಅರಿಕೇಸರಿಯನ್ನು ಹೋಲಿಸಿದ್ದಾನೆ. ಸಮಕಾಲೀನ ಮೌಲ್ಯಗಳನ್ನು ಸಂದರ್ಭಾನುಸಾರವಾಗಿ ದಾಖಲಿಸುತ್ತಾನೆ. ಈತನು ಕನ್ನಡ ಸಾಹಿತ್ಯಕ್ಕೆ ಆನೆ ನಡೆದುದೇ ಮಾರ್ಗ ಎಂಬಂತೆ ದಾರಿ ತೋರಿದ್ದಾನೆ. ಆದ್ದರಿಂದಲೇ ನಾಗರಾಜ ಕವಿಯು 'ಪಸರಿಪ ಕನ್ನಡಕ್ಕೊಡೆಯನೋರ್ವನೆ ಸತ್ಕವಿ ಪಂಪನಾವಗಂ' ಎಂದು ಘೋಷಿಸಿರುವುದು ಔಚಿತ್ಯಪೂರ್ಣವಾಗಿದೆ.

ಪಂಪನು ಹಾಕಿಕೊಟ್ಟ ಮಾರ್ಗದಲ್ಲಿ ಸಾಗಿದ ಮತ್ತೋರ್ವ ಕವಿ ಪೊನ್ನ. ಕನ್ನಡದ ರತ್ನತ್ರಯರು ಪಂಪ, ಪೊನ್ನ, ರನ್ನ.ಕನ್ನಡದ ಕವಿಚಕ್ರವರ್ತಿಗಳು ಪೊನ್ನ, ರನ್ನ, ಜನ್ನ. ರತ್ನತ್ರಯರಲ್ಲಿ ಎರಡನೆಯವನಾದ ಈತನ ಆಶ್ರಯದಾತ ರಾಷ್ಟ್ರಕೂಟರ ೩ನೇ ಕೃಷ್ಣ. ಪೊನ್ನನ ಧಾರ್ಮಿಕ ಕಾವ್ಯ ಶಾಂತಿಪುರಾಣ. ಇದರಲ್ಲಿ ೧೬ನೇ ತೀರ್ಥಂಕರನಾದ ಶಾಂತಿನಾಥನ ಚರಿತ್ರೆಯಿದೆ. ಹನ್ನೆರಡು ಆಶ್ವಾಸಗಳು ಒಳಗೊಂಡಿದೆ. ಅತ್ತಿಮಬ್ಬೆಯು ಶಾಂತಿಪುರಾಣದ ಸಾವಿರ ಪ್ರತಿಗಳನ್ನು ಮಾಡಿಸಿದಳು. ಭುವನೈಕ ರಾಮಾಭ್ಯುದಯ (ರಾಮಕಥೆ) ಕೃತಿಯು ಲೌಕಿಕ ಕಾವ್ಯವಾಗಿದೆ. ಈತನಿಗೆ `ಕುರುಳ್ಗಳ ಸವಣ' ಎಂಬ ಬಿರುದು ಇತ್ತು. 'ಕನ್ನಡ ಕವಿತೆಯೊಳ್ ಅಸಗಂಗಂ ನೂರ್ಮಡಿ, ಕಾಳಿದಾಸಂಗಂ ನಾಲ್ವಡಿ' ಎಂದು ಕವಿ ಹೇಳಿಕೊಂಡಿದ್ದಾನೆ.

ರನ್ನ ೧೦ನೇ ಶತಮಾನದ ಪ್ರಮುಖ ಕವಿ. ಈತನ 'ಅಜಿತತೀರ್ಥಂಕರ ಪುರಾಣಂ'ವು ಧಾರ್ಮಿಕ ಕಾವ್ಯ.ಅಜಿತ ಪುರಾಣದಲ್ಲಿ ಹದಿನಾಲ್ಕು ಆಶ್ವಾಸಗಳಿವೆ. ಜೈನರ ಎರಡನೆಯ ತೀರ್ಥಂಕರನಾದ ಅಜಿತಸ್ವಾಮಿ ಹಾಗೂ ಎರಡನೆಯ ಚಕ್ರವರ್ತಿಯಾದ ಸಗರನ ಚರಿತೆಯ ಕಥಾವಸ್ತು ಹೊಂದಿದೆ. 'ಸಾಹಸ ಭೀಮ ವಿಜಯಂ ಅಥವಾ ಗದಾಯುದ್ಧ'ವು ರನ್ನನ ಲೌಕಿಕ ಕಾವ್ಯ. ಮೂಲ ವ್ಯಾಸ ಭಾರತದ ಗದಾಸೌಪ್ತಿಕ ಪರ್ವದ ಕಥೆಯೇ ಇಲ್ಲಿ ಕೃತಿರೂಪ ತಾಳಿದೆ. ಇದು ಪಂಪನ 'ವಿಕ್ರಮಾರ್ಜುನವಿಜಯ'ದ ೧೩ನೇ ಆಶ್ವಾಸ, ಭಾಸನ 'ಊರುಭಂಗ', ಭಟ್ಟನಾರಾಯಣನ 'ವೇಣಿಸಂಹಾರ'ಗಳ ಪ್ರೇರಣೆಗೆ ಒಳಗಾದರೂ, ಸ್ವೋಪಜ್ಞತೆ ಮೆರೆದಿದೆ. ಚಾಲುಕ್ಯ ಚಕ್ರವರ್ತಿ ಸತ್ಯಾಶ್ರಯನನ್ನು ಭೀಮನೊಂದಿಗೆ ಸಮೀಕರಿಸಿ ಕಾವ್ಯ ರಚಿಸಿದ್ದಾನೆ. ಭೀಮನನ್ನು ಕಾವ್ಯ ನಾಯಕನನ್ನಾಗಿ ಮಾಡಿಕೊಂಡಿದ್ದಾನೆ. ತಾನು"ವಾಗ್ದೇವಿಯ ಭಂಡಾರದ ಮುದ್ರೆಯನೊಡೆದಂ" ಎಂದು, ತನ್ನ ಕಾವ್ಯ ವಿಮರ್ಶೆ ಮಾಡುವವರಿಗೆ 'ರನ್ನನ ಕೃತಿ ರತ್ನಮುಮಂ ಪೇಳ್ ಪರೀಕ್ಷಿಪಂಗೆಂಟೆರ್ದೆಯೇ' ಎಂದು ಸವಾಲು ಒಡ್ಡುತ್ತಾನೆ. ರನ್ನನ ಕಾವ್ಯದ ಕಲಾತ್ಮಕ ತಂತ್ರ 'ಸಿಂಹಾವಲೋಕನ ಕ್ರಮ'. ಜೊತೆಗೆ ಅದ್ಭುತ ನಾಟಕೀಯತೆ. ಕಾವ್ಯದಲ್ಲಿ ದುರ್ಯೋಧನನನ್ನು ಸುಯೋಧನನ್ನಾಗಿ ಗುರುತಿಸಿದ್ದಾನೆ.

ಗಂಗ ದೊರೆ ರಾಚಮಲ್ಲನ ಮಂತ್ರಿ ಹಾಗೂ ಸೇನಾಪತಿ ಚಾವುಂಡರಾಯ. ಈತನು ಶ್ರವಣಬೆಳಗೊಳದಲ್ಲಿ ೫೭ ಅಡಿ ಎತ್ತರದ ಗೊಮ್ಮಟೇಶ್ವರನ ಮೂರ್ತಿ ಪ್ರತಿಷ್ಠಾಪಿಸಿದವನು. ಈತನ ಚಾವುಂಡರಾಯ ಪುರಾಣ, ೨೪

ತೀರ್ಥಂಕರರ ಮತ್ತು ೬೩ ಶಲಾಕಾಪುರುಷರ ಚರಿತ್ರೆಯಿರುವ ಗದ್ಯ ಕೃತಿ. ಚಾವುಂಡರಾಯ ಪುರಾಣಕ್ಕಿರುವ ಇನ್ನೊಂದು ಹೆಸರು 'ತ್ರಿಷಷ್ಠಿ ಲಕ್ಷಣ ಮಹಾಪುರಾಣಂ'. ಚಾವುಂಡರಾಯ ಪುರಾಣದ ಸ್ವರೂಪವನ್ನು "ಗಂಭೀರ, ಧಾರಾಳ, ಚೊಕ್ಕಟ" ಎಂಬ ಮೂರು ಮಾತುಗಳಲ್ಲಿ ರಂ.ಶ್ರೀ. ಮುಗಳಿಯವರು ಹಿಡಿದಿಟ್ಟಿದ್ದಾರೆ.

ಒಂದನೇ ನಾಗವರ್ಮನ ಛಂದೋಂಬುಧಿ ಮತ್ತು ಕರ್ನಾಟಕ ಕಾದಂಬರಿ. 'ಛಂದೋಂಬುಧಿ' ಕನ್ನಡದ ಮೊದಲನೆಯ ಛಂದೋಗ್ರಂಥವಾಗಿದೆ. ಕರ್ನಾಟಕ ಕಾದಂಬರಿಯೂ ಬಾಣನ ಸಂಸ್ಕೃತ ಕಾದಂಬರಿಯ ಕನ್ನಡ ಅನುವಾದವಾಗಿದೆ. ಉನ್ನತ ಪ್ರೇಮದ ಸ್ವಪ್ನ ಚಿತ್ರಣ, ಪುಂಡರೀಕ - ಮಹಾಶ್ವೇತೆ, ಚಂದ್ರಾಪೀಡ-ಕಾದಂಬರಿಯರ ಪಾತ್ರ ಚಿತ್ರಣ, ಅಚ್ಛೋದ ಸರೋವರದ ವರ್ಣನೆ ಇರುವ ಕಾವ್ಯ ಇದಾಗಿದೆ.

ದುರ್ಗಸಿಂಹನ ಚಂಪೂಕಾವ್ಯ ಪಂಚತಂತ್ರ. ಇದು ವಸುಭಾಗಭಟ್ಟನ ಕೃತಿಯನ್ನು ಕನ್ನಡದಲ್ಲಿ ``ಪೊಸತಾಗಿರೆ ವಿರಚಿಸುವೆಂ" ಮರುಸೃಷ್ಟಿಯಾಗಿದೆ. ಪ್ರಾಣಿ-ಪಕ್ಷಿಗಳನ್ನು ಕಥೆಗಳಲ್ಲಿ ಬಳಸುವುದರ ಮೂಲಕ ನೀತಿ ಬೋಧನೆ ಮಾಡಲಾಗಿದೆ.

`ಅಭಿನವ ಪಂಪ' ಎಂದು ಹೆಸರಾದ ಕವಿ ನಾಗಚಂದ್ರ. ಈತನ ಕಾವ್ಯ 'ರಾಮಚಂದ್ರ ಚರಿತ ಪುರಾಣ'. ಇದಕ್ಕೆ ಇನ್ನೊಂದು ಹೆಸರು 'ಪಂಪ ರಾಮಾಯಣ'. ಈ ಪುರಾಣಕ್ಕೆ ಪ್ರಾಕೃತದ ಕವಿ ವಿಮಲಸೂರಿಯ 'ಪಉಮಚರಿಯ' ಆಕರವಾಗಿದೆ. ಕವಿ ರಾವಣನ ಪಾತ್ರವನ್ನು ವಿಶಿಷ್ಟವಾಗಿ ಚಿತ್ರಿಸಿದ್ದಾನೆ. ಸ್ವಭಾವತಃ ಒಳ್ಳೆಯವನಾದ ರಾವಣ ವಿಧಿಯ ಕೈವಾಡದಿಂದ 'ಪದ್ಮಪತ್ರದ ಜಲಬಿಂದುವಿನಂತೆ ಚಲಿತ ಮಾದುದು ಚಿತ್ತಂ' ಅದು ಅವನ ಅವಸಾನಕ್ಕೆ ಕಾರಣವಾಯಿತು. ಇನ್ನೂ 'ಮಲ್ಲಿನಾಥ ಪುರಾಣ'ದಲ್ಲಿ `ನಿನಗೆ ರಸವೊಂದೆ ಶಾಂತಮೆ ಜಿನೇಂದ್ರ' ಎಂದು ಸಾರುತ್ತಾನೆ.

``ನಾಣ್ಣುಡಿ ದೇಸಿವೆತ್ತ ಪೊಸನುಡಿ ಮಾರ್ಗಂ" ವನ್ನು ತುಳಿದ ನಯಸೇನ, ``ಶುದ್ಧ ಕನ್ನಡದೊಳ್ ತಂದಿಕ್ಕುವುದೇ ಸಕ್ಕದಂಗಳ ತಕ್ಕುದೆ, ಬೆರಸಲ್ಕೆ ಘೃತಮುಮಂ ತೈಲಮುಮಂ" ಎಂದು 'ಸಕ್ಕದವನ್ನು ಅನುಸರಿಸದೇ ಶುದ್ಧಕನ್ನಡದಲ್ಲಿ ಕಾವ್ಯ ಬರೆದಿರುವುದು ವಿಶೇಷವಾಗಿದೆ. ಈತನ `ಧರ್ಮಾಮೃತ' ಗದ್ಯಪ್ರಧಾನ ಚಂಪೂಕೃತಿ. ಇದರಲ್ಲಿ ``ಪರಮತ ವಿಡಂಬನೆಯ ಮೂಲಕ ಸ್ವಮತ ಸ್ಥಾಪನೆ" ಮಾಡಿದ. ಈ ತೆರನಾದ ಹೊಸ ಪರಂಪರೆಯೊಂದಕ್ಕೆ ಮೂಲ ಪುರುಷನಾಗಿ ಕೂಡ ನಿಲ್ಲುತ್ತಾನೆ.

ನೇಮಿಚಂದ್ರನ 'ಲೀಲಾವತಿಪ್ರಬಂಧ' `ಸ್ತ್ರೀ ರೂಪಮೆ ರೂಪಂ ಶೃಂಗಾರ ರಸಮೆ ರಸಂ' ಎಂದು ಶೃಂಗಾರ ರಸಕ್ಕೆ ಮೊದಲ ಪ್ರಾಶಸ್ತ್ಯವನ್ನು ನೀಡಿದ ಕನ್ನಡದ ಅಪರೂಪದ ಶೃಂಗಾರ ಕಾವ್ಯವಾಗಿದೆ. ನೇಮಿನಾಥ ಪುರಾಣ ಈತನ ಇನ್ನೊಂದು ಕಾವ್ಯ. ಅಲ್ಲದೆ ಜೋತಿಷ್ಯ ಗ್ರಂಥ, ಕಾಮಶಾಸ್ತ್ರ ಗ್ರಂಥ, ಗೋವೈದ್ಯ ಶಾಸ್ತ್ರ, ಗಣಿತಶಾಸ್ತ್ರ, ಗ್ರಂಥಶತಕ, ಅಷ್ಟಕ, ಮುಂತಾದ ಶಾಸ್ತ್ರ ಕೃತಿಗಳು ಈ ಶತಮಾನದಲ್ಲಿ ಬೆಳಕು ಕಂಡಿರುವುದನ್ನು ಕಾಣಬಹುದಾಗಿದೆ.

೧೨ನೇ ಶತಮಾನ ಕನ್ನಡ ಸಾಹಿತ್ಯಕ್ಕೆ ಹೊಸತನವನ್ನು ತಂದ ಕಾಲಘಟ್ಟ. ಮಾರ್ಗದಿಂದ ದೇಸಿಯತೆಯನ್ನು ಮೈಗೂಡಿಸಿಕೊಂಡು ಸರಳವಾದ ಆಡುಮಾತಿನ, ಜನಪರವಾದ, ವಚನ ರೂಪಬೆಳಕು ಕಂಡಿತು. ಇಲ್ಲಿ ಸಾಹಿತ್ಯ ರಾಜಾಶ್ರಯದಿಂದ ಜನಸಾಮಾನ್ಯನ ಮಟ್ಟಕ್ಕೆ ಇಳಿಯಿತು. ಸಮಾಜದಲ್ಲಿ ಕೆಲವರಿಗೆ ಮಾತ್ರ ಸೀಮಿತವಾಗಿದ್ದ ಸಾಹಿತ್ಯ ಜಾತ್ಯತೀತವಾಗಿ ಸಮಾಜದ ಎಲ್ಲಾ ವರ್ಗದ ಜನರು ಸಾಹಿತ್ಯ ಕೃಷಿ ಮಾಡಲು ಕಾರಣವಾಯಿತು. ಸ್ತ್ರೀಯರು ಪುರುಷರಿಗೆ ಸಮಾನವಾಗಿ ಸಾಹಿತ್ಯ ರಚನೆ ಮಾಡಿರುವುದು ಈ ಶತಮಾನದ ಮತ್ತೊಂದು ವಿಶೇಷ. ಕನ್ನಡ ನಾಡಿನಲ್ಲಿ ನಡೆದ ಬಹುದೊಡ್ಡ ಸಾಂಸ್ಕೃತಿಕ ಚಳುವಳಿಯಾಗಿ 'ವಚನ ಚಳುವಳಿ'

ರೂಪುತಾಳಿತು. ಸಮಾನತೆ-ಕಾಯಕ-ದಾಸೋಹದಂತಹ ಜೀವನ ಮೌಲ್ಯಗಳು ಜನಸಾಮಾನ್ಯರ ನಡೆ-ನುಡಿಯಲ್ಲಿ ಗಾಢವಾದ ಪ್ರಭಾವ ಬೀರಿದವು. ಗದ್ಯವೂ ಅಲ್ಲದ, ಪದ್ಯವೂ ಅಲ್ಲದ, ಅನುಭಾವ ಗದ್ಯ ಎಂದೇ ವಚನವೂ ಪ್ರಸಿದ್ಧಿ ಪಡೆಯಿತು. ವಚನಕಾರರು ವಚನ ಕೃಷಿ ಮಾಡಿದ ಬೇಸಾಯಗಾರರಾದರು. ಪ್ರಯುಕ್ತ ವಚನ ಸಾಹಿತ್ಯವು ಕರ್ನಾಟಕ ಅಷ್ಟೇ ಅಲ್ಲದೆ, ಇಡೀ ಜಾಗತಿಕ ಮಟ್ಟದಲ್ಲಿ ಮಹತ್ವದ ಸ್ಥಾನ ಪಡೆಯಿತು. ಬಸವಣ್ಣನವರ ನೇತೃತ್ವದಲ್ಲಿ ನೂರಾರು ಜನ ಶರಣರು ವಚನಗಳನ್ನು ರಚಿಸಿದರು. ಈ ವಚನಕಾರರ ಪ್ರಭಾವ ನಂತರದ ಕನ್ನಡ ಸಾಹಿತ್ಯದ ಮೇಲೆ ದಟ್ಟವಾಗಿ ಆಗಿರುವುದು ಕಂಡುಬರುತ್ತದೆ.

ವಚನಕಾರರ ಪ್ರಭಾವಕ್ಕೆ ಒಳಗಾದ ಹರಿಹರ ತನ್ನದೆಯಾದ ಹೊಸ ಮಾರ್ಗವನ್ನು ತುಳಿದ. ರಗಳೆ ಎಂಬ ರೂಪವನ್ನು ಪ್ರಧಾನ ಮಾಧ್ಯಮವನ್ನಾಗಿ ಬಳಸಿ, ನೂರಕ್ಕಿಂತಲೂ ಹೆಚ್ಚು ರಗಳೆಗಳನ್ನು ರಚಿಸಿ ರಗಳೆಯ ಕವಿ ಎಂದೇ ಖ್ಯಾತಿ ಪಡೆದನು. ರಗಳೆಯ ಕಥಾವಸ್ತು ಶಿವಶರಣರ ಚರಿತ್ರೆ. ಭಕ್ತಿಯೇ ಇವುಗಳ ಮೂಲದ್ರವ್ಯ. ಇದರ ಜೊತೆಗೆ 'ಗಿರಿಜಾಕಲ್ಯಾಣ' ಎಂಬ ಚಂಪೂ ಕಾವ್ಯವನ್ನು ರಚಿಸುವುದರ ಮೂಲಕ ರಗಳೆಯ ಕವಿ ಮಾತ್ರವಲ್ಲ ಎಂಬುದನ್ನು ಸಾಬೀತು ಪಡಿಸಿದನು.

ಹರಿಹರನ ಸೋದರಳಿಯನಾದ ರಾಘವಾಂಕನು ಷಟ್ಪದಿಯನ್ನು ಕಾವ್ಯ ಮಾಧ್ಯಮವನ್ನಾಗಿ ಮಾಡಿಕೊಂಡು ಷಟ್ಪದಿಯಲ್ಲಿಯೇ ಕಾವ್ಯವನ್ನು ರಚಿಸಿದನು. ಅದರಲ್ಲಿ ಹರಿಶ್ಚಂದ್ರ ಕಾವ್ಯ ಕನ್ನಡದ ಶ್ರೇಷ್ಠ ಕಾವ್ಯಗಳಲ್ಲಿ ಒಂದು. 'ಹರನೆಂಬುದೆ ಸತ್ಯ, ಸತ್ಯವೆಂಬುದೆ ಹರನು' ಎಂಬ ತತ್ವವನ್ನು ಪ್ರತಿಪಾದಿಸಿದನು. ಜನ ಬದುಕಲೆಂದು ಕಾವ್ಯವನ್ನು ಬರೆದೆ ಎಂಬ ಧೋರಣೆ ಈತನದು.

ನಡುಗನ್ನಡ ಸಾಹಿತ್ಯ ಸಂದರ್ಭದಲ್ಲಿ ಹೆಸರಿಸಲೇಬೇಕಾದ ಇನ್ನೊಬ್ಬ ಕವಿ ಸರ್ವಜ್ಞ. ತ್ರಿಪದಿಯನ್ನು ತನ್ನ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ, ಮಾಡಿಕೊಂಡು 'ಆಡುಮುಟ್ಟದ ಎಲೆ ಇಲ್ಲ; ಸರ್ವಜ್ಞ ಹೇಳದೇ ಇರುವ ವಿಷಯವಿಲ್ಲ' ಎಂಬಂತೆ ತೀವ್ರ ಮೊನಚಾದ ಭಾಷೆಯನ್ನು ಬಳಸಿದ ಈತನು ಪಾಮರರನ್ನು ನೇರವಾಗಿ ತಲುಪುತ್ತಾನೆ. ಜ್ಞಾನ, ಗುರು, ಲೋಕನೀತಿ, ಮಾತು, ಅನ್ನದ ಮಹತ್ವ, ಆರೋಗ್ಯ, ಹೆಣ್ಣು, ಸತ್ಯನಿಷ್ಠೆ, ಅರಿವು, ದಾಂಪತ್ಯ ಇತ್ಯಾದಿ ವಿಷಯಗಳನ್ನು ಮಾರ್ಮಿಕವಾಗಿ ತ್ರಿಪದಿಗಳಲ್ಲಿ ಚಿತ್ರಿಸಿದ್ದಾನೆ.

ನಡುಗನ್ನಡದ ಇನ್ನೊಬ್ಬ ಮಹಾಕವಿ ಕುಮಾರವ್ಯಾಸ. ಈತನು ಮಹಾಭಾರತದ ಕಥಾವಸ್ತುವನ್ನು ಒಳಗೊಂಡ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಷಟ್ಪದಿಯ ಕಾವ್ಯವನ್ನು ಬರೆದಿದ್ದಾನೆ. ತಿಳಿಯ ಹೇಳುವೆ ಕೃಷ್ಣ ಕಥೆಯನು ಇಳೆಯ ಜಾಣರು ಮೆಚ್ಚುವಂತೆ ಎಂದು ಕಾವ್ಯದಲ್ಲಿ ಕೃಷ್ಣ ಪಾರಮ್ಯವನ್ನು ಮೆರೆದಿದ್ದಾನೆ. ತಾನು ಲಿಪಿಕಾರನಷ್ಟೆ ವೀರನಾರಾಯಣನೇ ಕವಿ ಎಂದು ತಿಳಿಸುತ್ತಾನೆ. ವಿಸ್ತಾರವಾದ ಮಹಾಕಾವ್ಯವನ್ನು ರಚಿಸಿದ ಈತ ರೂಪಕಗಳನ್ನು ಹೇರಳವಾಗಿ ಬಳಸುವುದರ ಮೂಲಕ ವಿಮರ್ಶಕರಿಂದ 'ರೂಪಕ ಸಾಮ್ರಾಜ್ಯದ ಚಕ್ರವರ್ತಿ' ಎಂದು ಕರೆಸಿಕೊಂಡಿದ್ದಾನೆ. ಈತನ ಕಾವ್ಯ ಪ್ರೌಢಿಮೆಯನ್ನು ಮನಗಂಡ ಕುವೆಂಪುರವರು 'ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು, ಭಾರತ ಕಣ್ಣಲಿ ಕುಣಿವುದು' ಎಂಬ ಮಾತು ಔಚಿತ್ಯ ಪೂರ್ಣವಾಗಿದೆ. ಇದೇ ಕಾಲ ಘಟ್ಟದಲ್ಲಿದ್ದ ಉಪಮೆಗಳಿಗೆ ಹೆಸರಾದ ಲಕ್ಷ್ಮೀಶ; ಅಲ್ಲಮಪ್ರಭುವನ್ನು ಕಾವ್ಯ ನಾಯಕನನ್ನಾಗಿ ಮಾಡಿಕೊಂಡ ಚಾಮರಸನು ತಮ್ಮದೆ ಆದ ವಿಶೇಷತೆಯನ್ನು ಮೆರೆದಿದ್ದಾರೆ.

ವಚನ ಸಾಹಿತ್ಯ ಮತ್ತು ಕೀರ್ತನ ಸಾಹಿತ್ಯ ಒಂದು ನಾಣ್ಯದ ಎರಡು ಮುಖಗಳಂತೆ. ಹರಿದಾಸರು ಕೀರ್ತನೆಗಳನ್ನು ರಚಿಸಿದರು. ದೇವತಾ ಸ್ತುತಿ, ದೇವರ ನಾಮ ಸ್ಮರಣೆ, ಆತ್ಮ ವಿಮರ್ಶೆ, ಆತ್ಮ ನಿವೇದನೆ, ಲೋಕ ನೀತಿ, ಸಮಾಜ ವಿಮರ್ಶೆ, ಸಾಮಾಜಿಕ ವಿಡಂಬನೆ, ಮೌಢ್ಯ ನಿರಾಕರಣೆ ಮೊದಲಾದ ವಿಷಯಗಳನ್ನು ಪ್ರಸ್ತಾಪಿಸುತ್ತ ಉತ್ತಮ ಸಮಾಜವನ್ನು ನಿರ್ಮಾಣ ಮಾಡಬಯಸಿದರು. ವ್ಯಾಸರಾಯ, ಪುರಂದರದಾಸ, ಕನಕದಾಸ, ವಿಜಯದಾಸ, ಗೋಪಾಲದಾಸ ಹೀಗೆ ಹಲವು ಕೀರ್ತನಕಾರರು ಕೀರ್ತನ ಸಾಹಿತ್ಯಕ್ಕೆ ತಮ್ಮದೆಯಾದ ಕಾಣಿಕೆಯನ್ನು ನೀಡಿದ್ದಾರೆ. ಕೀರ್ತನೆಯ ಮುಂದುವರಿಕೆಯಾಗಿ, ತತ್ವಪದಗಳು ಸಹ ಜನಸಾಮಾನ್ಯರ ನಿಜಧ್ವನಿಗಳಾಗಿವೆ.

ಸಾಂಗತ್ಯದ ಪ್ರಮುಖ ಕವಿ ರತ್ನಾಕರವರ್ಣಿ. 'ಶೃಂಗಾರ ಕವಿ' ಎಂಬ ಅನ್ವರ್ಥಕ ಪಡೆದಿದ್ದಾನೆ. ಈತನ ಭರತೇಶ ವೈಭವವು ಹತ್ತುಸಾವಿರ ಪದ್ಯಗಳನ್ನು ಒಳಗೊಂಡ ಬೃಹತ್ ಕಾವ್ಯ. ಇದರಲ್ಲಿ ತ್ಯಾಗ-ಭೋಗಗಳ ಸಮನ್ವಯತೆಯನ್ನು ಸಾರಿದ್ದಾನೆ. ಸಂಚಿ ಹೊನ್ನಮ್ಮಳ ಹದಿಬದೆಯ ಧರ್ಮ ಎಂಬ ಸಾಂಗತ್ಯದ ಮತ್ತೊಂದು ಗಮನಾರ್ಹ ಕೃತಿ. ಸ್ತ್ರೀ ಪರವಾದ ನಿಲುವುಗಳನ್ನು ವ್ಯಕ್ತಪಡಿಸುವ ನೀತಿ ಪ್ರಧಾನ ಕಾವ್ಯ. ಸಮಕಾಲೀನ ಸಂದರ್ಭದಲ್ಲಿ ಮೈಸೂರು ಅರಸರ ಆಳ್ವಿಕೆಯಲ್ಲಿ ಕನ್ನಡ ಸಾಹಿತ್ಯದ ಹಲವು ಮಹತ್ವದ ಕೃತಿಗಳು ರಚನೆಯಾದವು. ನಡುಗನ್ನಡದ ಕೊನೆಯ ಮತ್ತು ಹೊಸಗನ್ನಡದ ಕೊಂಡಿಯಾದ ಕವಿ ಮುದ್ದಣನನ್ನು 'ಹೊಸಗನ್ನಡದ ಮುಂಗೋಳಿ' ಎಂದೇ ಕರೆಯಲಾಗುತ್ತದೆ. ಈತ ಹೊಸಗನ್ನಡದ ಓದುಗರ ಒಲವು-ನಿಲುವುಗಳನ್ನು ಅತ್ಯಂತ ಸಮರ್ಥವಾಗಿ ಪ್ರತಿನಿಧಿಸುತ್ತಾನೆ.

ಆಧುನಿಕ ಕನ್ನಡ ಸಾಹಿತ್ಯ ೨೦ನೇ ಶತಮಾನದ ಸಾಹಿತ್ಯವೆಂದು ಹೆಸರಾಗಿದೆ. ೧೯ನೇ ಶತಮಾನದ ಉತ್ತರಾರ್ಧದಲ್ಲಿ ಈ ಹೊಸ ಸಾಹಿತ್ಯದ ಬೀಜಗಳು ಮೊಳೆತು, ಬೆಳೆ ಹುಲುಸಾಗಿ ಕೈಗೆ ಬಂದದ್ದು ಇಪ್ಪತ್ತನೆಯ ಶತಮಾನದಲ್ಲಿ. ಅಂದಿನ ವಸಾಹತುಶಾಹಿ ಸಂಸ್ಕೃತಿಯ ಫಲವಾಗಿ ಹೊಸ ಶಿಕ್ಷಣ ಪದ್ಧತಿ, ಆಡಳಿತ, ಮುದ್ರಣ, ವಿಜ್ಞಾನ-ತಂತ್ರಜ್ಞಾನದ ಫಲವಾಗಿ ಧಾರ್ಮಿಕ-ಸಾಮಾಜಿಕ-ಸಾಂಸ್ಕೃತಿಕ ಜೀವನದ ಮೇಲೆ ಗಾಢವಾದ ಪ್ರಭಾವ ಬೀರಿದವು.

ಶತಮಾನಕ್ಕಿಂತ ಹೆಚ್ಚು ಇತಿಹಾಸ ಹೊಂದಿರುವ ಆಧುನಿಕ ಕನ್ನಡ ಸಾಹಿತ್ಯವು ಸಾಹಿತ್ಯಕವಾಗಿ ಹಲವು ವೈಶಿಷ್ಟ್ಯಗಳೊಂದಿಗೆ, ಹೆಚ್ಚು ಹೊಸತನವನ್ನು ಕಂಡುಕೊಳ್ಳುತ್ತ, ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಎಂಬ ಪ್ರಮುಖ ಧಾರೆಗಳಲ್ಲಿ ಹರಡಿಕೊಂಡಿದೆ. ಇದು ಕಾವ್ಯ, ಕಥೆ, ಕಾದಂಬರಿ, ನಾಟಕ, ಪ್ರಬಂಧ, ಆತ್ಮಕಥೆ, ಜೀವನ ಚರಿತ್ರೆ, ವಿಮರ್ಶೆ ಮುಂತಾದ ಪ್ರಕಾರಗಳಲ್ಲಿ ಸಮೃದ್ಧವಾಗಿ ಬೆಳೆದಿದೆ.

'ನವೋದಯ' ಹೊಸಗನ್ನಡದ ಮೊದಲ ಪ್ರಮುಖ ಘಟ್ಟ. ನವೋದಯ ಶಬ್ದ 'ಹೊಸಹುಟ್ಟು' ಎಂಬರ್ಥವನ್ನು ನೀಡುತ್ತದೆ. ಬಿ.ಎಂ. ಶ್ರೀಯವರ 'ಇಂಗ್ಲಿಷ್ ಗೀತೆಗಳು' ಕವನ ಸಂಕಲನವು ಹೊಸಗನ್ನಡ ಸಾಹಿತ್ಯಕ್ಕೆ ಅಧಿಕೃತ ಚಾಲನೆಯನ್ನು ನೀಡಿತು. ನವೋದಯ ಸಾಹಿತ್ಯಕ್ಕೆ ಪಾಶ್ಚಾತ್ಯ ವಿಚಾರಧಾರೆಗಳು ಮತ್ತು ಪೌರ್ವಾತ್ಯ ವಿಚಾರಧಾರೆಗಳು ಪ್ರಭಾವ ಬೀರಿವೆ. ಪಾಶ್ಚಾತ್ಯ ಕವಿಗಳಾದ ವರ್ಡ್ಸ್‌ವರ್ತ್, ಶೆಲ್ಲಿ, ಕೀಟ್ಸ್, ಬರ್ನ್ಸ್, ಟೆನಿಸನ್, ಅರ್ನಾಲ್ಡ್, ಷೇಕ್ಸ್ಪಿಯರ್ ಮೊದಲಾದ ಶ್ರೇಷ್ಠ ಕವಿಗಳ ಕಾವ್ಯಪ್ರೇರಣೆಯ ಜೊತೆಗೆ ರಾಷ್ಟ್ರೀಯತೆಯ ಪ್ರಜ್ಞೆ, ವೇದೋಪನಿಷತ್ತು, ಚರಿತ್ರೆ ಮತ್ತು ಪುರಾಣ ಪ್ರಜ್ಞೆ, ಸೈದ್ಧಾಂತಿಕ ಮತ್ತು ಆಧ್ಯಾತ್ಮಿಕ ಚಿಂತಕರ ಪ್ರಭಾವ, ನಾಡು ನುಡಿ ಪ್ರೀತಿ, ಪ್ರಕೃತಿ ಪ್ರೀತಿ, ವಿಭೂತಿ ಪುರುಷರಾದ ಬುದ್ಧ, ಬಸವಣ್ಣ, ಪರಮಹಂಸ, ಸ್ವಾಮಿ ವಿವೇಕಾನಂದ, ಅರವಿಂದ, ಮಹಾತ್ಮ ಗಾಂಧಿ ಮೊದಲಾದ ದಾರ್ಶನಿಕರ ಆಧ್ಯಾತ್ಮಿಕ ಚಿಂತನೆ, ದರ್ಶನ, ತಪಸ್ಸು, ಯೋಗ, ಅರಿವು, ಶಾಂತಿ, ಪೂರ್ಣದೃಷ್ಟಿ,

ನಿರಾಪೇಕ್ಷೆ ಧರ್ಮ, ಸಮಷ್ಟಿ ಪ್ರಜ್ಞೆ, ಸದ್ಭಾವನೆ, ಸನ್ನಡತೆ, ಸಚ್ಚಾರಿತ್ರ್ಯ, ಸಹೋದರತ್ವ, ವಿಶ್ವಭ್ರಾತೃತ್ವ ಮುಂತಾದ ಮಾನವೀಯ ಮೌಲ್ಯಗಳನ್ನು ಕುವೆಂಪು, ಬೇಂದ್ರೆ, ಡಿ.ವಿ.ಜಿ, ಪು.ತಿ.ನ, ಶಿವರಾಮ ಕಾರಂತ ಮೊದಲಾದವರು ಅಭಿವ್ಯಕ್ತಪಡಿಸಿದರು. ಸರಳ ಜನಪರ ಭಾಷೆಯ ಮೂಲಕ ಭಾವನಾತ್ಮಕ, ಚಿಂತನಾತ್ಮಕ ಮತ್ತು ವೈಜ್ಞಾನಿಕ ದೃಷ್ಟಿಯಿಂದ ಭಾಷೆಯನ್ನು ದುಡಿಸಿಕೊಂಡರು.

'ಪ್ರಗತಿಶೀಲ' ಹೊಸಗನ್ನಡದ ಮತ್ತೊಂದು ಘಟ್ಟ. ಜೀವನ ಹಸನಾಗಿಸುವ ಬಾಳು ಸಹ್ಯವಾಗಿಸುವ ಒಲವನ್ನು ಹೊಂದಿದೆ. ಹಿಂದಿನ ನವೋದಯ ಸಾಹಿತ್ಯ ಹೂ, ಹಣ್ಣು, ಚಿಗರು, ತಾರೆ, ಚಂದ್ರ, ಪ್ರೀತಿ-ಪ್ರಣಯ ಮುಂತಾದ 'ರೋಮ್ಯಾಂಟಿಕ್' ಬದುಕಿನ ಮಧ್ಯಮವರ್ಗವನ್ನು ತಣಿಸಿದರೆ; ಇದು ಸಮಾಜವಾದ, ಸಮತಾವಾದ, ವಾಸ್ತವವಾದ, ಉದಾರವಾದ, ಮಾನವೀಯವಾದಗಳಂತಹ ಸೈದ್ಧಾಂತಿಕ ಚಳುವಳಿಯ ಬೆಳಕಿನಲ್ಲಿ ರೂಪುಗೊಂಡಿತು. 'ಕಲೆಗಾಗಿ ಕಲೆಯಲ್ಲ; ಕಲೆ ಜೀವನಮುಖಿ' ಎಂಬುದನ್ನು ಪ್ರಮುಖ ಆಸ್ಥೆಯನ್ನಾಗಿ ಹೊಂದಿತು. ಅ.ನ.ಕೃ, ನಿರಂಜನ, ತರಾಸು, ಬಸವರಾಜ ಕಟ್ಟೀಮನಿ ಮೊದಲಾದವರು ಈ ಘಟ್ಟದಲ್ಲಿ ಸಾಹಿತ್ಯ ಕೃಷಿ ನಡೆಸಿದರು.

'ನವ್ಯ' ಸಾಹಿತ್ಯ ಘಟ್ಟವೂ ದೇಶೀ-ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಗಳ ಸ್ಥಿತ್ಯಂತರ ಸಂವೇದನೆಗಳಿಂದ ಮೂಡಿದ ಬಹುಮುಖ್ಯವಾದ ಸಾಹಿತ್ಯ ಧಾರೆಯಾಗಿದೆ. ಅಸ್ತಿತ್ವವಾದ, ಅಸಂಗತವಾದ, ಮನೋ ವೈಜ್ಞಾನಿಕವಾದ, ಮಾನವತಾವಾದ, ಶೂನ್ಯವಾದ, ಸಾಂಕೇತಿಕವಾದ, ಪ್ರತಿಮಾವಾದ, ಮಾರ್ಕ್ಸ್ವಾದ, ಲೋಹಿಯಾವಾದ ಮೊದಲಾದ ಸಂವೇದನೆಗಳನ್ನು ಸಾಹಿತ್ಯದ ಆಶಯವಾಗಿಟ್ಟುಕೊಂಡಿದೆ. ವಿ.ಕೃ. ಗೋಕಾಕ, ಗೋಪಾಲಕೃಷ್ಣ ಅಡಿಗ, ಪಿ.ಲಂಕೇಶ, ಗಂಗಾಧರ ಚಿತ್ತಾಲ, ಬಿ.ಸಿ. ರಾಮಚಂದ್ರಶರ್ಮ, ಸು.ರಂ. ಎಕ್ಕುಂಡಿ, ಚಂದ್ರಶೇಖರ ಕಂಬಾರ ಮೊದಲಾದವರು ಸಾಹಿತ್ಯ ರಚಿಸಿರುವುದನ್ನು ಕಾಣಬಹುದು.

'ದಲಿತ-ಬಂಡಾಯ' ಹೊಸಗನ್ನಡ ಸಾಹಿತ್ಯದ ಮತ್ತೊಂದು ಪ್ರಮುಖ ಘಟ್ಟ. ಸಾಹಿತ್ಯ ಸಮಾಜಮುಖಿಯಾಗಬೇಕು. ಶೋಷಿತರ, ಬಡವರ, ದಲಿತರ ಪರವಾದ ಸಂವೇದನೆಗಳನ್ನು ಒಳಗೊಂಡಿದೆ. ಮಾರ್ಕ್ಸ್ವಾದ, ಲೋಹಿಯವಾದ, ಅಂಬೇಡ್ಕರವಾದ, ದಲಿತ ಪ್ಯಾಂಥರ್‌ಗಳ ಚಿಂತನೆಗಳನ್ನು ಒಡಮೂಡಿಸಿಕೊಂಡು ಸಿದ್ಧಲಿಂಗಯ್ಯ, ದೇವನೂರು ಮಹಾದೇವ, ಮ.ನ. ಜವರಯ್ಯ, ಕುಂ.ವೀ, ಬರಗೂರು ರಾಮಚಂದ್ರಪ್ಪ, ಡಾ. ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ, ಚೆನ್ನಣ್ಣ ವಾಲೀಕಾರ ಮೊದಲಾದವರು ಈ ಸಾಹಿತ್ಯ ಘಟ್ಟದ ರೂವಾರಿಗಳು.

ಒಟ್ಟಾರೆಯಾಗಿ, ಕನ್ನಡ ಸಾಹಿತ್ಯ ಚರಿತ್ರೆಯುದ್ದಕ್ಕೂ ಕಥಾವಸ್ತು ಮತ್ತು ಆಶಯಗಳು ಆಯಾ ಕಾಲಘಟ್ಟಕ್ಕೆ ಅನುಗುಣವಾಗಿ ಸಮಕಾಲೀನ ಜೀವನದ ಪ್ರತಿನಿಧಿಕರಣವನ್ನು ಸೂಚಿಸುತ್ತದೆ. ಜೊತೆಗೆ ಭೂತದ ಬುನಾದಿಯ ಮೇಲೆ ವರ್ತಮಾನದಲ್ಲಿ ನಿಂತು, ಭವಿಷ್ಯದ ಬದುಕಿ ಜೀವನ ಮೌಲ್ಯಗಳನ್ನು ಕಟ್ಟಿಕೊಳ್ಳಲು ಕನ್ನಡ ಸಾಹಿತ್ಯ ಮಾರ್ಗದರ್ಶಿಯಾಗಿದೆ.

**ಪರಾಮರ್ಶನ ಗ್ರಂಥಗಳು :**

೧. ಮುಗಳಿ ರಂ.ಶ್ರೀ. ೨೦೧೨, ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು

೨. ರಾಮಚಂದ್ರಪ್ಪ ಬರಗೂರು - ಪ್ರ.ಸಂ. ೨೦೧೩ ಕರ್ನಾಟಕ ಸಂಗಾತಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

೩. ಶಿವರುದ್ರಪ್ಪ ಜಿ.ಎಸ್. - ಪ್ರ.ಸಂ. ೧೯೭೪ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ , ಸಂಪುಟ-೧ರಿಂದ೧೦ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೪. ಶಿವರುದ್ರಪ್ಪ ಜಿ.ಎಸ್. ಡಾ. ಸಂ. ೨೦೧೦ ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ, ಸಂಪುಟ.೧ ರಿಂದ ೧೦ ಸಪ್ನಬುಕ್ ಹೌಸ, ಬೆಂಗಳೂರು